**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿ.ಸಿ.ನಂಬ್ರ:1223/2019**

D.W -2

**ಸಾಕ್ಷಿದಾರರ ಹೆಸರು** : ರವಿಕುಮಾರ
**ತಂದೆಯ ಹೆಸರು** : ಕುಬೇರಪ್ಪ
**ವಯಸ್ಸು** : 37 ವರ್ಷ
**ಉದ್ಯೋಗ** : ಕೂಲಿ ಕೆಲಸ
**ವಾಸ** : ಕೆಂಚಾಪುರ, ಹರಪನಹಳ್ಳಿ ತಾಲೂಕು

**ದಿನಾಂಕ: 29-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಆರೋಪಿ ಪರ ವಕೀಲರಿಂದ**

ಫಿರ್ಯಾದಿ ಆರೋಪಿತನ ವಿರುದ್ಧ ಚೆಕ್ ಅಮಾನ್ಯಗೊಂಡ ಕುರಿತು ಪ್ರಕರಣ ದಾಖಲಿಸಿರುತ್ತಾರೆ. ಆ ಕುರಿತು ನನಗೆ ವಿಷಯ ಗೊತ್ತಿರುತ್ತದೆ. ಆರೋಪಿ ಗೊತ್ತು. ಆತ ನಮ್ಮ ಊರಿನವನು. ಆರೋಪಿ ಮೆಣಸಿನ ಬೀಜವನ್ನು ಕೊಡುತ್ತಾನೆ. ಆತ ನನಗೆ 15 – 20 ವರ್ಷಗಳಿಂದ ಪರಿಚಯಸ್ಥ. ಆರೋಪಿ ಮೊದಲು ಮೆಣಸಿನ ಬೀಜ ಕೊಟ್ಟಿದ್ದು ಅದನ್ನು ಜಮೀನಿನಲ್ಲಿ ಬಿತ್ತನೆ ಮಾಡಿ ಬೆಳೆ ಬಂದ ನಂತರ ನಾವು ಆತನಿಗೆ ಹಣ ಕೊಡುತ್ತಿದ್ದೆವು. ಮುಂಗಡ ಹಣ ಕೊಟ್ಟಿದ್ದಕ್ಕೆ ಭದ್ರತೆಗಾಗಿ ಚೆಕ್ಕು ಮತ್ತು ಸ್ಟ್ಯಾಂಪನ್ನು ಪಡೆಯುತ್ತಿದ್ದರು. ಸದ್ರಿ ನಮ್ಮ ಸಂಪೂರ್ಣ ವ್ಯವಹಾರ ಮುಗಿದ ನಂತರ ನಾನು ಕೊಟ್ಟ ಚೆಕ್ಕನ್ನು ಮರಳಿ ಕೊಟ್ಟಿರುತ್ತಾನೆ.

ಆರೋಪಿ ಮೇಲೆ ಫಿರ್ಯಾದಿದಾರ ಬೀಜಕ್ಕಾಗಿ ಕೊಟ್ಟ ಮುಂಗಡ ಹಣದ ಭದ್ರತೆಗಾಗಿ ಚೆಕ್ಕನ್ನು ಹಾಜರುಪಡಿಸಿದ ವಿಷಯಕ್ಕಾಗಿ ಪ್ರಕರಣ ದಾಖಲಿಸಿರುತ್ತಾರೆ. 2016 – 17 ರಲ್ಲಿ ನಾನು ಮತ್ತು ನಮ್ಮ ಗ್ರಾಮದವರು ಗಿಡ ಹಚ್ಚಿ ಬೆಳೆದು ಬೀಜವನ್ನು ಮಾರಾಟ ಮಾಡುತ್ತಿದ್ದೆವು. 2016 – 17 ಆದ ನಂತರ ಫಿರ್ಯಾದಿಗೆ 20 ಕೆಜಿಯಷ್ಟು ಬೀಜವನ್ನು ಕೊಟ್ಟಿದ್ದೆವು. ಇದಾದ ನಂತರ 2019 ರಲ್ಲಿ ಆರೋಪಿ ಫಿರ್ಯಾದಿದಾರನಿಗೆ 47 ಕೆಜಿ ಬೀಜವನ್ನು ಕೊಟ್ಟ ವಿಷಯ ಗೊತ್ತಾಯಿತು. ಅದೇ ವಿಷಯಕ್ಕಾಗಿ ಊರಲ್ಲಿ ಅವರಿಬ್ಬರ

ಮಧ್ಯೆ ಗಲಾಟೆಯಾದ ಬಗ್ಗೆ ಗೊತ್ತಾಯಿತು. ನಂತರ ಸದ್ರಿ ಫಿರ್ಯಾದಿ ಆರೋಪಿತನ ಮೇಲೆ ಚೆಕ್ ಅಮಾನ್ಯದ ಕುರಿತು ಪ್ರಕರಣದ ದಾಖಲಿಸಿರುತ್ತಾರೆ ಎಂದು ಗೊತ್ತಾಯಿತು. ಸದ್ರಿ ಫಿರ್ಯಾದಿ ಚೆಕ್ಕನ್ನು ಮರಳಿ ಕೊಟ್ಟಿಲ್ಲ. ಆರೋಪಿ ಹೇಳಿದ್ದೇನೆಂದರೆ ಆತ ಚೆಕ್ಕನ್ನು ಮರಳಿ ಕೇಳಲು ಹೋದಾಗ ಇಂದು ನಾಳೆ ಕೊಡುತ್ತೇನೆ ಎಂದು ಹೇಳಿ ತನ್ನ ಮಕ್ಕಳ ಬಳಿ ಇವೆ ಕೊಡುತ್ತೇನೆ ಎಂದು ಹೇಳಿ ಮುಂದೆ ಹಾಕುತ್ತಾ ಬಂದು ನಂತರ ಪ್ರಕರಣ ದಾಖಲಿಸಿರುತ್ತಾನೆ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ರೂ.500/- ದಂಡದೊಂದಿಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**